
# ಕರಾವಳಿ ಕಥನಗಳು

# ತುಳು ಮಾತೃಕೆಗಳ ತಾತ್ತ್ವಿಕ ಶೋಧ



ರಾಜಶೇಖರ ಹಳೆಮನೆ

ಕೆ. ಚಿನ್ನಪ್ಪ ಗೌಡರು ನಲವತ್ತು ವರ್ಷಗಳಿಂದ ನಿರಂತರವಾಗಿ ತುಳುನಾಡಿನ ಜಾನಪದವನ್ನು ಸಾಂಸ್ಕೃತಿಕವಾಗಿ ಅಧ್ಯಯನ ಮಾಡುತ್ತಾ ಬಂದಿದ್ದಾರೆ. ನಾಡಿನಲ್ಲಿ ತುಳು ಭಾಷೆ ಹಾಗೂ ತುಳು ಸಂಸ್ಕೃತಿ ವಿಭಿನ್ನ. ಪ್ರಾದೇಶಿಕ ಅಸ್ಮಿತೆಯ ಭಾಷೆಗಳು ಮಾರುಕಟ್ಟೆ ಅಧಿಕಾರದ ಕಾರಣಕ್ಕೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿವೆ. ಆದರೆ, ತುಳು ಭಾಷೆ ತನ್ನ ನೆಲದ ನಂಟಿನೊಂದಿಗೆ ಜೀವಂತವಾಗಿ ಬೆಳೆಯುತ್ತಿದೆ. ತುಳುನಾಡಿನ ಜನರು ಭಾಷೆಯೊಂದಿಗೆ ಅವಿನಾಭಾವ ಸಂಬಂಧವನ್ನು ಇಟ್ಟುಕೊಂಡು ಬದುಕಿನ ಪಲ್ಲಟಗಳ ಲಯದೊಂದಿಗೆ ಆ ಭಾಷೆಯನ್ನು ಜೋಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಕಥೆ, ಕಾವ್ಯ, ಕಾದಂಬರಿ, ಸಿನಿಮಾ ಕಥೆ-ಹಾಡು, ಯಕ್ಷಗಾನ, ಮಾಧ್ಯಮಗಳಲ್ಲಿ ತುಳು ಭಾಷೆಗೆ ಹೊಸ ಆಯಾಮ ನೀಡುತ್ತಿದ್ದಾರೆ. ಈ ಸ್ಥಿತ್ಯಂತರಗಳೊಂದಿಗೆ ಜನಪದರು ಸೃಷ್ಟಿಸಿದ ಪಠ್ಯಗಳನ್ನು ಚಿನ್ನಪ್ಪ ಗೌಡರು ಅಧ್ಯಯನಕ್ಕೆ ಒಳಪಡಿಸುತ್ತಾರೆ. ಅವರ ಪಠ್ಯಗಳ ನೋಟ, ಅಧ್ಯಯನ ವಿಧಾನ, ಪಾಂಡಿತ್ಯದ ವಿವೇಕ ಮತ್ತು ಸೂಕ್ಷ್ಮತೆಯಿಂದ ಕೂಡಿದೆ.

ಭೂತಾರಾಧನೆ, ಸಿರಿ ಪಾಡ್ದನಗಳನ್ನು ವಿಶೇಷವಾಗಿ ಅಧ್ಯಯನ ಮಾಡಿದ ಚಿನ್ನಪ್ಪ ಗೌಡರು 'ಕರಾವಳಿ ಕಥನಗಳು' ಕೃತಿಯಲ್ಲಿ ಇನ್ನಷ್ಟು ಖಚಿತವಾಗಿ ತಾತ್ತ್ವಿಕವಾಗಿ ತುಳುನಾಡಿನ ಜಾನಪದ ಲೋಕವನ್ನು ನೋಡಿದ್ದಾರೆ. ಜಾನಪದ ಲೋಕದ ಜೊತೆಗೆ ತುಳು ಭಾಷೆ ಇತರ ಭಾಷೆಗಳಿಗೆ ಅನುವಾದಗೊಳ್ಳುತ್ತಿರುವ ಬಗೆ, ಆಧುನಿಕವಾಗಿ ಪಡೆದುಕೊಳ್ಳುತ್ತಿರುವ ಸಾತತ್ಯವನ್ನು ಕುರಿತು ವಿಶ್ಲೇಷಣಾತ್ಮಕ ಚಿಂತನೆಯನ್ನು ಗಂಭೀರವಾಗಿ ಮಾಡಿದ್ದಾರೆ. ಯಕ್ಷಗಾನ ಪರಂಪರೆಯ ಚರಿತ್ರೆಗೆ ಹೊಸ ಸಿದ್ಧಾಂತವೊಂದನ್ನು ಮಂಡಿಸಿದ್ದಾರೆ.

ಆಧುನಿಕ ಶೈಕ್ಷಣಿಕ ಮತ್ತು ಜಾನಪದ ಸಿದ್ಧಾಂತಗಳ ಮೂಲಕ ಪಠ್ಯಗಳ ಒಳಧ್ವನಿಗಳನ್ನು ವಿಂಗಡಿಸಿ, ಮರು ಆಕೃತಿಗಳನ್ನು ಕಟ್ಟುವುದು ಇವರ ವಿಶೇಷ. ಮುಖ್ಯವಾಗಿ ತಳ ಸಮುದಾಯಗಳು ತಮ್ಮ ರಚನೆಗಳ ಮೂಲಕ ಕಟ್ಟಿಕೊಡುವ ಲೋಕದೃಷ್ಟಿಯ ಕಡೆ ಇವರ ಗಮನ